## ಗದ್ಯಪಾಠ – ೫ ಪ್ರಜಾನಿಷ್ಠೆ

**ಆ] ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

**೧. ಹಲವರು ತಲಕಾಡನ್ನು ಲೂಟಿ ಮಾಡಬೇಕೆಂದು ಹೇಳಿದಾಗ ದೊರೆ ವಿಷ್ಣುವರ್ಧನನು ಏನೆಂದು ಹೇಳಿದನು?**

**ಅಥವಾ**

**೨. ತಲಕಾಡಿನ ಲೂಟಿಯ ವಿಚಾರದಲ್ಲಿ ವಿಷ್ಣುವರ್ಧನನ ನಿಲುವೇನು?**

**ಉತ್ತರ:** ತಲಕಾಡಿನ ಲೂಟಿಯ ಬಗ್ಗೆ ವಿಷ್ಣುವರ್ಧನನು, "ಸೆರೆ ಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮ ಅಲ್ಲ; ಸೋತ ಸಾಮ್ರಾಜ್ಯವನ್ನು ಲೂಟಿ ಮಾಡುವುದು ಯುದ್ಧ ಧರ್ಮವಲ್ಲ... ಆ ಕಾರಣ ನೀವೆಲ್ಲರೂ ತಲಕಾಡವರನ್ನು ತಮ್ಮವರೆಂದೇ ತಿಳಿದು ನಡೆಸಿಕೊಳ್ಳಿ. ಅವರ ಮನೋಭೀತಿಯನ್ನು ದೂರ ಮಾಡಿ ಶಾಂತಿ ಸ್ಥಾಪನೆ ಮಾಡಿ, ನಾಲ್ಕು ದಿನಗಳಾದ ಮೇಲೆ ರಾಜಧಾನಿಗೆ ಹಿಂದಿರುಗೋಣ." ಎಂದು ಹೇಳಿದನು.

**೩. ಬನದಮ್ಮನ ಹಳ್ಳಿಯ ದೇವಾಲಯದ ಮುಂದೆ ಯಾವ ವಿಚಾರವಾಗಿ ಚರ್ಚೆ ನಡೆದಿತ್ತು?**

**ಉತ್ತರ:** ಬೀರಣ್ಣ ತನ್ನ ಹೊಲವನ್ನು ನೂರೆಂಟು ಹೊನ್ನಿಗೆ ಈರಣ್ಣನಿಗೆ ಮಾರಿದ್ದನು. ಈರಣ್ಣ ಹೊಲ ಉಳುತ್ತಿದ್ದಾಗ ಆ ಹೊಲದಲ್ಲಿ ಒಂದು ಕೊಪ್ಪರಿಗೆಯಷ್ಟು ಹೊನ್ನು ಸಿಕ್ಕಿತು. ಅವನು ಅದನ್ನು ಪೂಜೆ ಮಾಡಿ ಬೀರಣ್ಣನ ಮನೆಗೆ ತೆಗೆದುಕೊಂಡು ಹೋಗಿ "ಈ ಹೊನ್ನು ನಿನ್ನದು ತೆಗೆದುಕೋ" ಎಂದನು. ಆದರೆ ಬೀರಣ್ಣ "ನಿನಗೆ ಹೊಲ ಮಾರಿದ ಮೇಲೆ ಅದು ನಿನಗೇ ಸೇರಬೇಕು. ಅದು ನನ್ನದಲ್ಲ" ಎಂದು ನಿರಾಕರಿಸಿದನು. ಆ ವಿಚಾರವಾಗಿ ಬನದಮ್ಮನ ಹಳ್ಳಿಯ ದೇವಾಲಯದ ಮುಂದೆ ಚರ್ಚೆ ನಡೆದಿತ್ತು.

**೪. ದೈವದವರ ತೀರ್ಪಿನ ಬಗೆಗೆ ಶಾಂತಲೆಯ ಅಭಿಪ್ರಾಯವೇನು?**

**ಉತ್ತರ:** ದೈವದವರ ತೀರ್ಪನ್ನು ಕೇಳಿದ ಶಾಂತಲೆ: "ಬೊಕ್ಕಸಕ್ಕೆ ಸೇರಲು ಇದು ಸಾಮ್ರಾಟರ ದುಡಿಮೆಯಲ್ಲ... ಅವರ ಬೆವರಿನ ಫಲ ಅಲ್ಲ... ಅದು ಪ್ರಜೆಗಳ ಬೆವರಿನ ಫಲ! ಆದ್ದರಿಂದ ಅದು ಪ್ರಜೆಗಳಿಗೇ ಸೇರಬೇಕು" ಎಂದು ಅಭಿಪ್ರಾಯಪಟ್ಟಳು.

**೫. ಶಾಂತಲೆಯು ನೀಡಿದ ತೀರ್ಪೇನು?**

**ಉತ್ತರ:** "ಇದು ದೈವದ ದುಡ್ಡು, ದೇವಕಾರ್ಯಕ್ಕೆ ವಿನಿಯೋಗವಾಗಬೇಕಾದ್ದು ಧರ್ಮ... ನಮ್ಮ ಸಂಸ್ಕೃತಿಯ ಶ್ರೀಮಂತಿಕೆಗೆ ಸಾಕ್ಷಿಯಾಗಿ ಒಂದು ಕಲಾದೇಗುಲವನ್ನು ರಾಜಧಾನಿ ದ್ವಾರಸಮುದ್ರದಲ್ಲಿ ನಿರ್ಮಿಸಬೇಕು. ಅವಳಿ ದೇಗುಲಗಳ ಶಿಲ್ಪಕಲೆ ಹೊಯ್ಸಳರ ಶೈಲಿಗೆ ಮಾದರಿಯಾಗಿರಬೇಕು... ಒಂದು ಕಲಾಪೂರ್ಣ ದೇವಾಲಯಕ್ಕಾಗಿ ಈ ಹೊನ್ನು ವಿನಿಯೋಗವಾಗಲಿ. ಆ ದೇವಾಲಯಗಳನ್ನು ಕೇತಮಲ್ಲನಾಯಕರ ಹೆಸರಿನಲ್ಲಿ ಕಟ್ಟಬೇಕು" ಎಂದು ಶಾಂತಲೆ ತೀರ್ಪುನೀಡಿದಳು.

**ಇ] ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**೧. ಚೋಳ ದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಇದ್ದ ಕಾರಣ ಹಾಗೂ ಪರಿಣಾಮವನ್ನು ವಿವರಿಸಿ.**

**ಉತ್ತರ:** ದಿನೇದಿನೇ ಪ್ರವರ್ಧಮಾನಕ್ಕೆ ಬರುತ್ತಿರುವ ವಿಷ್ಣುವರ್ಧನನನ್ನು ಬಡಿಯಬೇಕೆಂದು ಶತ್ರು ರಾಜರುಗಳನೇಕರು–ಹವಣಿಸುತ್ತಿದ್ದರು. ಅವರಲ್ಲಿ ಚೋಳಮಂಡಲದ ಕುಲೋತ್ತುಂಗ ಪ್ರಮುಖನಾದವನು. ಕುಲೋತ್ತುಂಗ ಪ್ರಚಂಡ ಆಶಾವಾದಿ. ಅಖಂಡ ಭರತಖಂಡದ ಒಡೆತನವನ್ನು ಬಯಸುತ್ತಿದ್ದ ದುರಾಶಾಪಿಶಾಚಿ. ಗಂಗ ಸಾಮ್ರಾಜ್ಯವನ್ನು ತನ್ನ ವಶ ಮಾಡಿಕೊಳ್ಳಲೆಂದು ಆಶಿಸಿ, ಆದಿಯಮನನ್ನು ಪ್ರಚೋದಿಸಿ ದ್ವಾರಸಮುದ್ರದ ಮೇಲೆ ಕಳುಹಿಸಿದ.

ಇದನ್ನು ಗುಪ್ತಚಾರರಿಂದ ತಿಳಿದ ಹೊಯ್ಸಳೇಶ್ವರನು ಸಕಲ ಸೇನಾ ಸಮೇತನಾಗಿ ಯುದ್ಧಕ್ಕೆ ಸನ್ನದ್ಧನಾದನು. ದ್ವಾರಸಮುದ್ರದ ಸೇನೆ ತಲಕಾಡಿನ ಕಡೆಗೆ ಜೈತ್ರಯಾತ್ರೆ ಹೊರಟಿತು. ಮಳವಳ್ಳಿ, ಮುಡುಕುತೊರೆಗಳ ಬಳಿಯಲ್ಲಿ ಘನಘೋರ ಯುದ್ಧ ನಡೆದು; ಹೊಯ್ಸಳರ ಕೈ ಮೇಲಾಗಿ ಚೋಳಸೇನೆ ಕಂಗಾಲಾಯಿತು. ಆದಿಯಮ ಯುದ್ಧದಲ್ಲಿ ಮಡಿದ. ಅವನ ಸತ್ತ ಸುದ್ದಿ ತಿಳಿಯುತ್ತಲೆ ಚೋಳಸೇನೆ ದಿಕ್ಕಾಪಾಲಾಗಿ ಓಡಿತು. ತಲಕಾಡ ಕೋಟೆ ಸುಲಭವಾಗಿ ವಿಷ್ಣುವರ್ಧನ ಭೂಪಾಲನ ಕೈವಶವಾಯಿತು. ಸಮಸ್ತ ಸೇನೆಯು 'ತಲಕಾಡುಗೊಂಡನಿಗೆ ಜಯವಾಗಲಿ' ಎಂದು ಜೈಕಾರ ಹಾಕಿತು.

**೨. ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ನಡೆದ ನ್ಯಾಯ ಹಾಗೂ ಅದರ ತೀರ್ಪಿನ ಬಗ್ಗೆ ವಿವರಿಸಿ.**

**ಉತ್ತರ:** ಪಂಚಾಯಿತಿಯಲ್ಲಿ ಬೀರಣ್ಣ ಮತ್ತು ಈರಣ್ಣ ಒಬ್ಬರಿಗೊಬ್ಬರು ಹೊನ್ನು ತಮ್ಮದಲ್ಲ ಎಂದಾಗ ಊರಿನ ಮುಖಂಡ ಕೇತಮಲ್ಲನು "ಇವರಿಬ್ಬರಿಗೂ ಬೇಡವೆಂದ ಮೇಲೆ ಈ ಹೊನ್ನು ರಾಜ್ಯದ ಬೊಕ್ಕಸಕ್ಕೆ ಸೇರಲಿ" ಎಂದನು. ಇದನ್ನೆಲ್ಲ ಉದಯಾದಿತ್ಯನೊಡನೆ ಮರೆಯಲ್ಲಿ ನಿಂತು ನೋಡುತ್ತಿದ್ದ ಶಾಂತಲೆ "ಕೂಡದು.. ಕೂಡದು.." ಎಂದಾಗ ಎಲ್ಲರ ಗಮನ ಅತ್ತ ಹೋಯಿತು.

ಕೇತಮಲ್ಲನು ಗಂಡುಡೆಯಲ್ಲಿದ್ದ ಶಾಂತಲೆಯನ್ನು ಗುರುತಿಸದೆ "ನೀವು... ಈ ಹೊನ್ನು ರಾಜ್ಯದ ಬೊಕ್ಕಸಕ್ಕೆ ಸೇರಬಾರದು ಅಂದಿರಲ್ಲಾ ಯಾಕೆ?" ಎಂದನು ಅದಕ್ಕವಳು "ಬೊಕ್ಕಸಕ್ಕೆ ಸೇರಲು ಇದು ಸಾಮ್ರಾಟರ ದುಡಿಮೆಯಲ್ಲ... ಅದು ಪ್ರಜೆಗಳ ಬೆವರಿನ ಫಲ! ಆದ್ದರಿಂದ ಅದು ಪ್ರಜೆಗಳಿಗೇ ಸೇರಬೇಕು" ಎಂದಳು. ಆ ಮಾತಿಗೆ ಕೇತಮಲ್ಲನು "ಹಾಗಾದರೆ ಪ್ರಜೆಗಳು ಯಾರವರು? ಹೊಯ್ಸಳೇಶ್ವರರ ಮಕ್ಕಳಲ್ಲವೇ? ಮಕ್ಕಳ ದುಡಿಮೆ ತಂದೆಯದಲ್ಲವೇ?" ಎಂದನು. ಅವನ ವಾದವನ್ನು ಕೇಳಿದ ಶಾಂತಲೆ "ನಿಮ್ಮ ಊರಿನ ಹಣ ನಿಮ್ಮ ಊರಿಗೇ ವಿನಿಯೋಗವಾಗಲಿ" ಎಂದಳು. ನಂತರ ಉದಯಾದಿತ್ಯ ಅವರು ಗಂಡುಡೆಯಲ್ಲಿರುವ ಶಾಂತಲಾದೇವಿ ಎಂದು ತಿಳಿಸಿದ ನಂತರ ಎಲ್ಲರೂ ಅವರಿಗೆ ತಮ್ಮ ಭಕ್ತಿ ಸಮರ್ಪಿಸಿದರು. ನಂತರ ಊರಿನ ಜನ ತಮಗೆ ಆ ಹೊನ್ನಿನ ಅವಶ್ಯಕತೆಯಿಲ್ಲ, ಅದು ರಾಜ್ಯದ ಕ್ಷೇಮಕ್ಕೆ ಮೀಸಲು. ಎಂದಾಗ "ಇದು ದೈವದ ದುಡ್ಡು, ದೇವಕಾರ್ಯಕ್ಕೆ ವಿನಿಯೋಗವಾಗಬೇಕಾದ್ದು ಧರ್ಮ... ರಾಜಧಾನಿ ದ್ವಾರಸಮುದ್ರದಲ್ಲಿ ಹೊಯ್ಸಳರ ಶೈಲಿಗೆ ಮಾದರಿಯಾದಂತಹ ಅವಳಿ ದೇವಾಲಯ ನಿರ್ಮಾಣಕ್ಕಾಗಿ ಈ ಹೊನ್ನು ವಿನಿಯೋಗವಾಗಲಿ." ಎಂದು ಶಾಂತಲೆ ತೀರ್ಪುನೀಡಿದಳು.

**ಈ] ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

**೧. "ತಲಕಾಡುಗೊಂಡನಿಗೆ ಜಯವಾಗಲಿ"**

**ಆಯ್ಕೆ:** ಈ ವಾಕ್ಯವನ್ನು **ಸಾ. ಶಿ. ಮರುಳಯ್ಯ** ಅವರು ರಚಿಸಿರುವ **'ಪ್ರಜಾನಿಷ್ಠೆ'** ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ವಿಷ್ಣುವರ್ಧನನು ಕುಲೋತ್ತುಂಗ ಚೋಳನ ದಂಡನಾಯಕ ಆದಿಯಮನನ್ನು ಯುದ್ಧದಲ್ಲಿ ಸೋಲಿಸಿ, ತಲಕಾಡನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಸಮಸ್ತ ಸೇನೆಯು ಈ ರೀತಿ ಜೈಕಾರ ಹಾಕಿತು.

**ಸ್ವಾರಸ್ಯ:** ಇಲ್ಲಿ ವಿಷ್ಣುವರ್ಧನನ ಸೈನಿಕ ಶಕ್ತಿ, ತಲಕಾಡನ್ನು ವಶಪಡಿಸಿಕೊಂಡ ನಂತರ ಸೈನಿಕರ ವಿಜಯೋತ್ಸಾಹ ಸ್ವಾರಸ್ಯಕರವಾಗಿ ವ್ಯಕ್ತಗೊಂಡಿದೆ.

**೨. "ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮವಲ್ಲ"**

**ಆಯ್ಕೆ:** ಈ ವಾಕ್ಯವನ್ನು **ಸಾ. ಶಿ. ಮರುಳಯ್ಯ** ಅವರು ರಚಿಸಿರುವ **'ಪ್ರಜಾನಿಷ್ಠೆ'** ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ವಿಷ್ಣುವರ್ಧನನು ಕುಲೋತ್ತುಂಗ ಚೋಳನ ದಂಡನಾಯಕ ಆದಿಯಮನನ್ನು ಯುದ್ಧದಲ್ಲಿ ಸೋಲಿಸಿ, ತಲಕಾಡನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಹಲವರು ತಲಕಾಡು ನಗರವನ್ನು ಲೂಟಿ ಮಾಡಬೇಕೆಂದು ಇಚ್ಛಿಸಿದ ಸಂದರ್ಭದಲ್ಲಿ ಪ್ರಜಾಪಾಲಕನಾದ ವಿಷ್ಣುವರ್ಧನನು ಸೈನಿಕರಿಗೆ "ಸೆರೆ ಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮ ಅಲ್ಲ; ಸೋತ ಸಾಮ್ರಾಜ್ಯವನ್ನು ಲೂಟಿ ಮಾಡುವುದು ಯುದ್ಧ ಧರ್ಮವಲ್ಲ" ಎಂದು ಹೇಳುತ್ತಾನೆ.

**ಸ್ವಾರಸ್ಯ:** ಇಲ್ಲಿ ವಿಷ್ಣುವರ್ಧನನಲ್ಲಿದ್ದ ಮಾನವೀಯ ಗುಣ ಹಾಗೂ ಪ್ರಜಾಹಿತಚಿಂತನೆ ಸ್ವಾರಸ್ಯಕರವಾಗಿ ವ್ಯಕ್ತಗೊಂಡಿದೆ.

**೩. "ತಂಬುಲ ಉಗದ ಮ್ಯಾಲೆ ಮತ್ತೆ ಎತ್ತಿ ಬಾಯಿಗಾಕ್ಕೊಳ್ಳೋ ಕೆಟ್ಟತನ ಬ್ಯಾಡಾ"**

**ಆಯ್ಕೆ:** ಈ ವಾಕ್ಯವನ್ನು **ಸಾ. ಶಿ. ಮರುಳಯ್ಯ** ಅವರು ರಚಿಸಿರುವ **'ಪ್ರಜಾನಿಷ್ಠೆ'** ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ಈರಣ್ಣನು ಬೀರಣ್ಣನಿಂದ ಕೊಂಡುಕೊಂಡ ಹೊಲದಲ್ಲಿ ಉಳುತ್ತಿದ್ದಾಗ ಅಲ್ಲಿ ಒಂದು ಕೊಪ್ಪರಿಗೆಯಷ್ಟು ಹೊನ್ನು ಸಿಕ್ಕಿತು. ಅವನು ಅದನ್ನು ಪೂಜೆ ಮಾಡಿ ಬೀರಣ್ಣನ ಮನೆಗೆ ತೆಗೆದುಕೊಂಡು ಹೋಗಿ 'ಈ ಹೊನ್ನು ನಿನ್ನದು ತೆಗೆದುಕೋ' ಎಂದನು. ಆ ಸಂದರ್ಭದಲ್ಲಿ ಬೀರಣ್ಣ 'ನಿನಗೆ ಹೊಲ ಮಾರಿದ ಮೇಲೆ ಅದು ನಿನಗೇ ಸೇರಬೇಕು. ಅದು ನನ್ನದಲ್ಲ. ತಂಬುಲ ಉಗದ ಮ್ಯಾಲೆ ಮತ್ತೆ ಎತ್ತಿ ಬಾಯಿಗಾಕ್ಕೊಳ್ಳೋ ಕೆಟ್ಟತನ ಬ್ಯಾಡಾ' ಎಂದು ನಿರಾಕರಿಸಿದನು.

**ಸ್ವಾರಸ್ಯ:** ಈ ಸಂದರ್ಭದಲ್ಲಿ ಈರಣ್ಣ ಮತ್ತು ಬೀರಣ್ಣ ಇವರಿಬ್ಬರಲ್ಲಿದ್ದ ನಿಸ್ವಾರ್ಥತೆ, ದುರಾಸೆ ಇಲ್ಲದ ಧರ್ಮಪರತೆ ಸ್ವಾರಸ್ಯಕರವಾಗಿ ಮೂಡಿಬಂದಿದೆ.